॥ ಶ್ರೀ ಗುರುಭ್ಯೋ ನಮಃ ॥ ॥ ಓಂ ನಮೋ ಶಿವಾಯಃ ॥ ॥ ಸ್ವಾಮಿಯೇ ಶರಣಂ ಅಯ್ಯಪ್ಪ ॥

# ಶ್ರೀ ಮುತ್ತಪ್ಪ ಕ್ಷೇತ್ರ (ರಿ)

ಶಕ್ತಿನಗರ ಮಂಗಳೂರು



18ನೇ ವರ್ಷದ

# ಪ್ರತಿಷ್ಠಾ ಮಹೋತ್ಸವ



## ಕು। ದುರ್ಗಾಶ್ರೀ

ಇವರಿಗೆ ಗೌರವ ಪೂರ್ವಕವಾಗಿ ನೀಡುತ್ತಿರುವ

# ಸನ್ಮಾನ ಪತ್ರ

ದಿನಾಂಕ : 26-02-2016

ಗೌರವಾನ್ವಿತರೇ,

ದ.ಕ. ಜಿಲ್ಲೆಯ ಮಂಗಳೂರು ತಾಲೂಕಿನ ಶಕ್ತಿನಗರದಲ್ಲಿ ದುರ್ಗಾಶ್ರೀಯು 2000ನೇ ಇಸವಿ ಎಪ್ರಿಲ್ ತಿಂಗಳ 2ನೇ ತಾರೀಖಿನಂದು ಜನನ. ತಂದೆ ವಿಜಯ ಕುಮಾರ್ ರೈಲ್ವೆ ಇಲಾಖೆಯಲ್ಲಿ ಇನ್ಸ್‌ಪೆಕ್ಟರಾಗಿದ್ದು. ತಾಯಿ ನಳಿನಿ ಪೊಲೀಸ್ ಇಲಾಖೆಯಲ್ಲಿ ಆಸಿಸ್ಟೆಂಟ್ ಇನ್ಸ್‌ಪೆಕ್ಟರಾಗಿ ದುಡಿಯುತ್ತಿದ್ದಾರೆ. ದುರ್ಗಾಶ್ರೀ ಮನೆತನವೇ ಕಲಾವಿದರ ಕುಟುಂಬವಾಗಿದೆ. ದುರ್ಗಾಶ್ರೀಯು ಡೊಂಗರಕೇರಿ ಹೆಣ್ಣು ಮಕ್ಕಳ ಕೆನರಾ ಹೈಸ್ಕೂಲಿನಲ್ಲಿ 10ನೇ ತರಗತಿಯಲ್ಲಿ ಕಲಿಯುತ್ತಿದ್ದಾರೆ. ಈಕೆಯು ಶಾಸ್ತ್ರೀಯ ಸಂಗೀತ ಮತ್ತು ಭರತನಾಟ್ಯದಲ್ಲಿ ಜ್ಯೂನಿಯರ್ ಗ್ರೇಡ್ ಪಾಸಾಗಿದ್ದು, ಯಕ್ಷಗಾನದಲ್ಲಿ ಪರಿಣಿತಿಯನ್ನು ಹೊಂದಿದ್ದಾರೆ.

ಅಲ್ಲದೆ ಕ್ರೀಡಾಕ್ಷೇತ್ರದಲ್ಲಿ ವಾಲಿಬಾಲ್ ಆಟದಲ್ಲಿ ಜಿಲ್ಲಾ ಮಟ್ಟದಲ್ಲಿ ಭಾಗವಹಿಸಿರುತ್ತಾರೆ. ಡ್ರಾಯಿಂಗ್ ಮತ್ತು NCC ಯಲ್ಲಿ "A" ಗ್ರೇಡ್‌ನಲ್ಲಿ ಪಾಸಾಗಿರುತ್ತಾರೆ. ಅನೇಕ ಕಡೆ ನೃತ್ಯ ಕಾರ್ಯಕ್ರಮವನ್ನು ನೀಡಿ ಅನೇಕ ಬಹುಮಾನಗಳನ್ನು ಗಳಿಸಿರುತ್ತಾರೆ. ಶಾಲಾ ವಾರ್ಷಿಕೋತ್ಸವ ಹಾಗೂ ಇನ್ನಿತರ ಕಡೆಗಳಲ್ಲಿ ನೃತ್ಯ ತರಬೇತಿಯನ್ನು ನೀಡಿರುತ್ತಾರೆ. ದುರ್ಗಾಶ್ರೀಯು ಅಂತರಾಷ್ಟ್ರೀಯ ಮಟ್ಟದ ಸ್ಯಾಕ್ಸೋಫೋನ್ ಕಲಾವಿದ ಶ್ರೀ ಮಂಗಳದೇವಿ ಮಚ್ಚೆಂದ್ರನಾಥ ಅವರಲ್ಲಿ ಸತತ ಕಠಿಣ ಪರಿಶ್ರಮದಿಂದ ಸ್ಯಾಕ್ಸೋಫೋನ್ ತರಬೇತಿ ಪಡೆದು . ಗುರುಗಳ ಸಮ್ಮುಖದಲ್ಲಿ ಅನೇಕ ಸ್ಯಾಕ್ಸೋಫೋನ್ ಕಾರ್ಯಕ್ರಮ ನೀಡಿರುತ್ತಾರೆ. ಬೆಂಗಳೂರು, ಹಾಸನ, ಬೆಳಗಾಂ ಹಾಗೂ ಶಾರದೋತ್ಸವದ ಸಂದರ್ಭದಲ್ಲಿ ನಳಂದ ಶಾಲಾ ಸಭಾಭವನದಲ್ಲಿ ಸ್ಯಾಕ್ಸೋಫೋನ್ ನುಡಿಸಿ ಸೈ ಎನಿಸಿಕೊಂಡಿದ್ದಾರೆ. ಅನೇಕ ಸಂಘ ಸಂಸ್ಥೆಗಳು ಅವಳನ್ನು ಗುರುತಿಸಿ ಸನ್ಮಾನಿಸಿದ್ದಾರೆ

ಅಧ್ಯಕ್ಷರು
ಶ್ರೀ ಮುತ್ತಪ್ಪ ಕ್ಷೇತ್ರ, ಶಕ್ತಿನಗರ

